ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ- ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಕಟ್ಟಡಗಳ ಪೂರಕ ಬ್ಲಾಕ್,
ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-1.

ಸಂಖ್ಯೆ: ಆರ್.ಎಂ.ಎಸ್.ಎ/42/ಬ್ಯಾಂಕ್ ಖಾತೆ/2009-10 ದಿನಾಂಕ: 12.10.2011

**ಸುತ್ತೋಲೆ**

ವಿಷಯ:- 2011-12ನೇ ಸಾಲಿಗೆ ಆರ್.ಎಂ.ಎಸ್.ಎ ಚಟುವಟಿಕೆಗಳ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:- ಪಿ.ಎ.ಬಿ ನಡಾವಳಿ ಪತ್ರ ಸಂಖ್ಯೆ: ಎಫ್-1-44/2011 , Sch-1 ದಿನಾಂಕ: 14.09.2011.

* * * * *

ಉಲ್ಲೇಖಿತ ನಡಾವಳಿಯಂತೆ 2011-12ನೇ ಸಾಲಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆಯಾಗಿರುವ ಚಟುವಟಿಕೆಗಳಿಗೆ ಅನುಬಂಧದಲ್ಲಿ ನೀಡಿರುವಂತೆ ಶಾಲಾ ಅನುದಾನ, ಸಣ್ಣ ಪ್ರಮಾಣದ ದುರಸ್ಥಿ ಅನುದಾನ ಮತ್ತು ಹತ್ತನೇ ತರಗತಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮಗಳಿಗಾಗಿ ಅನುದಾನ ಬಿಡುಗಡೆ ಮಾಡಿದೆ.ಬಿಡುಗಡೆ ಮಾಡಿರುವ ಅನುದಾನಗಳ ಜಿಲ್ಲಾವಾರು ವಿವರ ಅನುಭಂದ-1 ರಲ್ಲಿ ನೀಡಿದೆ.

ಶಾಲಾ ಅನುದಾನ ಮತ್ತು ಸಣ್ಣ ಪ್ರಮಾಣದ ದುರಸ್ಥಿಅನುದಾನಗಳನ್ನು ಹಾಗು ಪ್ರವಾಸಕ್ಕೆ ಸಂಭಂದಿಸಿದ ಅನುದಾನವನ್ನು ಅನುಭಂಧದಲ್ಲಿ ನೀಡಿರುವಂತೆ ಈಗಾಗಲೇ ಶಾಲಾ ಹಂತದಲ್ಲಿ ತೆರೆಯಲಾಗಿರುವ ಆರ್.ಎಂ.ಎಸ್.ಎ ಬ್ಯಾಂಕ್ ಖಾತೆಗೆ ದಿನಾಂಕ: 31.10.2011ರೊಳಗೆ ಬಿಡುಗಡೆ ಮಾಡಲು ಹಾಗು ಈಗಾಗಲೇ ತಿಳಿಸಿರುವಂತೆ ಜಂಟಿಖಾತೆಯಲ್ಲಿ ನಿಯಮಾನುಸಾರ ವ್ಯವಹರಿಸಲು ಸೂಚಿಸುವುದು.

**ಶಾಲಾ ಅನುದಾನ** :- 2011-12 ನೇ ಸಾಲಿಗೆ 9 ಮತ್ತು 10ನೇ ತರಗತಿ ಹೊಂದಿರುವ ಸರ್ಕಾರಿ ಪ್ರೌಢಶಾಲೆಗಳಿಗೆ ಪ್ರತಿ ಶಾಲೆಗೆ ರೂ 50000/- ದಂತೆ ಬಿಡುಗಡೆ ಮಾಡುವುದು. **ಶಾಲಾ ಅನುದಾನದ ಬಳಕೆ ಬಗ್ಗೆ 2010-11 ರಲ್ಲಿ ಮಾರ್ಗಸೂಚಿ ಹೊರಡಿಸಲಾಗಿದ್ದು ಅದರಂತೆ ಕ್ರಮವಹಿಸಲು ಶಾಲಾ ಮುಖ್ಯಸ್ಥರಿಗೆ ಸೂಚನೆ ನೀಡುವುದು. 2009-10 ಮತ್ತು 2010-11 ರ ಮಾರ್ಗಸೂಚಿಗಳು ಇಲಾಖೆಯ ವೆಬ್ ಸೈಟ್ ಗಳಾದ www.ssakarnataka.gov.in/circular ಮತ್ತು www.schooleducation.kar.nic.in ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ.**

ಈ ಅನುದಾನಗಳನ್ನು ನೀಡಿರುವ ಮಾರ್ಗಸೂಚಿಯಲ್ಲಿ ಯಾವುದೇಬದಲಾವಣೆ ಮಾಡದೆ ಬಳಸುವುದು. ಯಾವುದೇ ವ್ಯತ್ಯಾಸಗಳಾಗಿದ್ದಲ್ಲಿ ಮುಖ್ಯ ಶಿಕ್ಷಕರೆ ಹೊಣೆಗಾರರಾಗುತ್ತಾರೆ

ವಿಜ್ಞಾನ ಪ್ರಯೋಗಾಲಯಕ್ಕೆ ಸಂಭಂದಿಸಿದಂತೆ ಎನ್.ಸಿ.ಇ.ಆರ್.ಟಿ ವತಿಯಿಂದ ಅಭಿವೃದ್ಧಿ ಪಡಿಸಿರುವ ವಿಜ್ಞಾನ ಕಿಟ್‌ಗಳನ್ನು ಸರ್ಕಾರಿ ಪ್ರೌಢ ಶಾಲೆಗಳ ಶಾಲಾ ಅನುದಾನದಲ್ಲಿ ಖರೀದಿಬಹುದಾಗಿದ್ದು ಎನ್.ಸಿ.ಇ.ಆರ್.ಟಿಯಿಂದ ಪ್ರಕಟವಾಗಿರುವ ಮಾಹಿತಿಯನ್ನು ಈ ಕೆಳಗೆ ನೀಡಿರುವ ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ. ಮುಖ್ಯ ಶಿಕ್ಷಕರು ಈ ಎರಡು ವೆಬ್ ಸೈಟ್ ವಿಳಾಸಗಳಿಂದ ಮಾಹಿತಿ ಪಡೆದು ಅವಶ್ಯಕ ವಿಜ್ಞಾನ ಕಿಟ್‌ಗಳನ್ನುಪಡೆಯಬಹುದಾಗಿದೆ.

**1.www.ssakarnataka.gov.in/circular**
**2. www.schooleducation.kar.nic.in**

1. **ಸಣ್ಣ ಪ್ರಮಾಣದ ದುರಸ್ಥಿ ಅನುದಾನ:-**

ಈ ಸುತ್ತೋಲೆಯೊಂದಿಗೆ ಜಿಲ್ಲಾವಾರು ಸರ್ಕಾರಿ ಪ್ರೌಢಶಾಲೆಗಳ ಪಟ್ಟಿ ಲಗತ್ತಿಸಿದ್ದು ಈ ಶಾಲೆಗಳನ್ನು ಪರಿಶೀಲಿಸಿ ಸ್ವಂತ ಕಟ್ಟಡ ಹೊಂದಿರುವ ಸರ್ಕಾರಿ ಪ್ರೌಢ ಶಾಲೆಯಾಗಿದ್ದು 9 ನೇ ತರಗತಿ ಪ್ರಾರಂಭವಾಗಿದ್ದರೆ ಮಾತ್ರ ಪ್ರತಿ ಶಾಲೆಗೆ ರೂ 25000/- ದಂತೆ ಬಿಡುಗಡೆ ಮಾಡುವುದು.

**ಸಣ್ಣ ಪ್ರಮಾಣದ ದುರಸ್ತಿ ಅನುದಾನದ ಬಳಕೆ ಬಗ್ಗೆ 2010-11 ರಲ್ಲಿ ಮಾರ್ಗಸೂಚಿ ಹೊರಡಿಸಲಾಗಿದ್ದು ಅದರಂತೆ ಕ್ರಮವಹಿಸಲು ಶಾಲಾ ಮುಖ್ಯಸ್ಥರಿಗೆ ಸೂಚನೆ ನೀಡುವುದು. 2009-10 ಮತ್ತು 2010-11 ರ ಮಾರ್ಗಸೂಚಿಗಳು www.ssakarnataka.gov.in/circular ಮತ್ತು www. schooleducation.kar.nic.in ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ. ಇವುಗಳನ್ನು ಪಡೆಯಲು ಮುಖ್ಯ ಶಿಕ್ಷಕರಿಗೆ ಸೂಚಿಸುವುದು. ಈ ಅನುದಾನಗಳನ್ನು 2010-11ರ ಮಾರ್ಗಸೂಚಿಯಂತೆ ಯಾವುದೇ ಬದಲಾವಣೆ ಮಾಡದೆ ಬಳಸುವುದು. ಯಾವುದೇ ವ್ಯತ್ಯಾಸಗಳಾಗಿದ್ದಲ್ಲಿ ಮುಖ್ಯ ಶಿಕ್ಷಕರೆ ಹೊಣೆಗಾರರಾಗುತ್ತಾರೆ.**

2. **ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರವಾಸ ಅನುದಾನ :-**

2011-12ನೇ ಸಾಲಿನ ಆರ್.ಎಂ.ಎಸ್.ಎ ಯೋಜನೆಯಡಿಯಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ 10ನೇ ತರಗತಿ ಓದುತ್ತಿರುವ ಮಕ್ಕಳಿಗೆ ಶೈಕ್ಷಣಿಕ ಪ್ರವಾಸ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರವು ಅನುಮೋದನೆ ನೀಡಿದ್ದು ರಾಜ್ಯದಲ್ಲಿ 10ನೇ ತರಗತಿ ಓದುತ್ತಿರುವ ಸರ್ಕಾರಿ ಪ್ರೌಢ ಶಾಲೆಗಳ ಒಟ್ಟು 318953 ಮಕ್ಕಳಿಗೆ ಒಂದು ದಿನದ ಪ್ರವಾಸಕ್ಕೆ ಅನುಮೋದನೆ ನೀಡಿರುತ್ತದೆ. ಅದರಂತೆ ಒಂದು ಮಗುವಿಗೆ 200 ರೂಗಳ ಅನುದಾನವನ್ನು ಮಂಜೂರು ಮಾಡಿರುತ್ತದೆ. ಈಗಾಗಲೇ ಸಾರ್ವಜನಿಕ ಶಿಕ್ಷಣ ಇಲಾಖೆಯ ವೆಬ್ ಸೈಟ್ schooleducation.kar.nic.in/circular ಹಾಗೂ ಎಸ್.ಎಸ್.ಎ ವೆಬ್ ಸೈಟ್ ssakarnataka.gov.in/circular ನಲ್ಲಿ ಮಾರ್ಗಸೂಚಿಯನ್ನು ಅಪ್‌ಲೋಡ್ ಮಾಡಲಾಗಿದ್ದು ಸದರಿ ವೆಬ್ ಸೈಟ್‌ನಿಂದ ಮಾರ್ಗಸೂಚಿಯನ್ನು ಪಡೆದು ಶಾಲೆಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳುವುದು. ಶೈಕ್ಷಣಿಕ ಪ್ರವಾಸವನ್ನು ನವೆಂಬರ್ ಮತ್ತು ಡಿಸೆಂಬರ್ ತಿಂಗಳೊಳಗಾಗಿ ಅನುಷ್ಠಾನಗೊಳಿಸಬೇಕಾಗಿರುತ್ತದೆ. ಈ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗು ಮುಖ್ಯ ಶಿಕ್ಷಕರ ಸಭೆ ನಡೆಸಿ ಹತ್ತನೇ ತರಗತಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರವಾಸಕ್ಕೆ ಸಂಬಂಧಿಸಿದಂತೆ 30-08-2011 ರಲ್ಲಿದ್ದಂತೆ ದಾಖಲಾತಿಯನ್ನು ಪಡೆದು ಮರುಹಂಚಿಕೆ ಮಾಡುವುದು.

ಯಾವುದೇ ಕಾರಣಕ್ಕೂ ಮಕ್ಕಳ ಸಂಖ್ಯೆಯನ್ನು ಹೆಚ್ಚು ಮಾಡಲು ಸಾಧ್ಯವಿರುವದಿಲ್ಲ. ಒಂದು ವೇಳೆ ಜಿಲ್ಲೆಯಲ್ಲಿ ಮಕ್ಕಳ ಸಂಖ್ಯೆ ಹೆಚ್ಚಾದಲ್ಲಿ ಹಾಜರಾತಿ ಮಾನದಂಡವನ್ನು ಅನುಸರಿಸಿ ಮಕ್ಕಳ ಸಂಖ್ಯೆಯನ್ನು ಮರು ಹಂಚಿಕೆ ಮಾಡುವುದು ಹಾಗೂ ಕ್ರಿಯಾ ಯೋಜನೆ ಸಿದ್ದಪಡಿಸಿಕೊಳ್ಳಲು ತಿಳಿಸುವುದು. ಮಕ್ಕಳ ಸಂಖ್ಯೆಯನ್ನು ಶಾಲಾವಾರು ಸಿದ್ದಪಡಿಸಿ ಶಾಲೆಗಳಿಗೆ ಒಂದು ವಿದ್ಯಾರ್ಥಿಗೆ ರೂ200/- ರಂತೆ ಅನುದಾನವನ್ನು ಬಿಡುಗಡೆ ಮಾಡುವುದು. ಡಿ.ವೈ.ಪಿ.ಸಿ ಗಳಿಗೆ ಈ ಕಾರ್ಯಕ್ರಮ ಅನುಷ್ಠಾನದ ಜವಾಬ್ದಾರಿ ನೀಡಿ ಉಪನಿರ್ದೇಶಕರು ಕಾಲಕಾಲಕ್ಕೆ ಅನುಪಾಲನೆ ಮಾಡುವುದು ಹಾಗು ಕಾಲ ಮಿತಿಯೊಳಗೆ ಕಾರ್ಯಕ್ರಮ ಅನುಷ್ಠಾನಗೊಳ್ಳುವಂತೆ ಕ್ರಮ ವಹಿಸುವುದು.

2011-12 ನೇ ಸಾಲಿಗೆ ಪತ್ರದೊಂದಿಗೆ ಬಿಡುಗಡೆ ಮಾಡುತ್ತಿರುವ ಅನುದಾನಗಳ ಕುರಿತಂತೆ ಅನುಸರಿಸಬೇಕಾದ ಕ್ರಮಗಳನ್ನು ಈ ಮುಂದೆ ನೀಡಲಾಗಿದೆ.

*ಉಪ ನಿರ್ದೇಶಕರು (ಆಡಳಿತ) ರವರು ಕೈಗೊಳ್ಳಬೇಕಾದ ಕ್ರಮಗಳು :*

1. ಎಲ್ಲಾ ಹಂತದ ಬ್ಯಾಂಕ್ ಖಾತೆಗಳು ಜಂಟಿಖಾತೆಗಳಾಗಬೇಕಿರುತ್ತದೆ. ಈಗಾಗಲೇ ಶಾಲಾಹಂತದ ಖಾತೆಗಳನ್ನು ಜಂಟಿ ಖಾತೆಗಳನ್ನಾಗಿ ಪರಿವರ್ತಿಸಲು ಸೂಚನೆ ನೀಡಿರುವದನ್ನು ನೆನಪಿಸುತ್ತ ಜಿಲ್ಲಾ ಹಂತದಲ್ಲಿ ಉಪನಿರ್ದೇಶಕರು ಮತ್ತು ಲೆಕ್ಕ ಅಧೀಕ್ಷಕರ ಜಂಟಿ ಖಾತೆಯಾಗಿರಬೇಕು. ಲೆಕ್ಕ ಅಧೀಕ್ಷಕರಿಲ್ಲದಿರುವ ಜಿಲ್ಲೆಗಳಲ್ಲಿ ಉಪನಿರ್ದೇಶಕರು ಮತ್ತು ಡಿ.ವೈ.ಪಿ.ಸಿ ಯವರ ಜಂಟಿಖಾತೆ ಆಗಿರಬೇಕು. ಶಾಲೆಗಳಲ್ಲಿ ಮುಖ್ಯ ಶಿಕ್ಷಕರು ಹಾಗು ಹಿರಿಯ ಶಿಕ್ಷಕರ ಜಂಟಿಖಾತೆ ಯಾಗಿರಬೇಕು. ಉನ್ನತೀಕರಿಸಿದ ಶಾಲೆಗಳಲ್ಲಿ ಪ್ರಭಾರಿ ಮುಖ್ಯ ಶಿಕ್ಷಕರಿರುವ ಶಾಲೆಗಳಲ್ಲಿ ಪ್ರಭಾರಿ ಮುಖ್ಯ ಶಿಕ್ಷಕರು ಹಾಗು ಆ ಶಾಲೆಯ ಟಿ.ಜಿ.ಟಿ ಶಿಕ್ಷಕರು ಪ್ರಭಾರಿ ಮುಖ್ಯ ಶಿಕ್ಷಕರಿಲ್ಲದ ಶಾಲೆಯಲ್ಲಿ ಟಿ.ಜಿ.ಟಿ. ಶಿಕ್ಷಕರು ಮತ್ತು ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರ ಜಂಟಿಖಾತೆಯಾಗಿರಬೇಕು ಹಾಗು ಎಲ್ಲಾ ಬ್ಯಾಂಕ್ ವ್ಯವಹಾರಗಳು ಜಂಟಿಖಾತೆಯಲ್ಲಿಯೆ ಆಗಬೇಕು ಎಂದುತಿಳಿಸಿದೆ. 2009-10 ಮತ್ತು 2010-11ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು (Audit) ಶೀಘ್ರದಲ್ಲಿ ಕೈಗೊಳ್ಳಲು ಆಯೋಜಿಸಿದ್ದು ಸಂಬಂಧಿಸಿದ ಎಲ್ಲಾ ಲೆಕ್ಕ ಪತ್ರಗಳನ್ನು ಶಾಲೆ ಮತ್ತು ಜಿಲ್ಲಾ ಹಂತದಲ್ಲಿ ಸಿದ್ಧಪಡಿಸಿಕೊಳ್ಳಲು ತಿಳಿಸಿದೆ.

2. ರಾಜ್ಯ ಕಛೇರಿಯ ಸುತ್ತೋಲೆಯಂತೆ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳ ಮುಖ್ಯಶಿಕ್ಷಕರು ಶಾಲಾ ಹಂತದಲ್ಲಿ RMSA ಗೆ ಸಂಬಂಧಿಸಿದಂತೆ ಎಸ್.ಬಿ.ಐ ಅಥವಾ ಎಸ್.ಬಿ.ಎಂ. ನಲ್ಲಿ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆದಿರುತ್ತಾರೆ. ಈ ಬ್ಯಾಂಕ್ ಖಾತೆಗಳ ವಿವರಗಳು ಜಿಲ್ಲಾಹಂತದಲ್ಲಿದ್ದು ಈ ಖಾತೆಗಳಿಗೆ ಅನುದಾನಗಳನ್ನು ಬಿಡುಗಡೆ ಮಾಡುವುದು.
3. ಶಾಲೆಗಳಿಗೆ ನೀಡುವ ಅನುದಾನಗಳನ್ನು ಬಳಸುವ ಬಗ್ಗೆ, ಲೆಕ್ಕ ಪತ್ರಗಳನ್ನು ನಿರ್ವಹಿಸುವ ಬಗ್ಗೆ ಜಿಲ್ಲೆಯ ಎಲ್ಲಾ ಮುಖ್ಯ ಶಿಕ್ಷಕರಿಗೆ ಲೆಕ್ಕ ಶಾಖೆಯ ಮೂಲಕ ತರಬೇತಿ ನೀಡುವುದು ಹಾಗು ಶಾಲಾ ಭೇಟಿ ಸಮಯದಲ್ಲಿ ಅನುಪಾಲನೆ ಮಾಡಿ ಲೆಕ್ಕಪತ್ರಗಳನ್ನು ಪರಿಶೀಲಿಸುವುದು.
4. ನೀಡಿರುವ ಅನುದಾನಗಳ ಚಟುವಟಿಕೆವಾರು ಉಪಯೋಗವಾಗಿರುವ ಬಗ್ಗೆ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಉಪಯೋಗತಾ ಪ್ರಮಾಣ ಪತ್ರವನ್ನು ಪಡೆದು ಜಿಲ್ಲಾ ಕಛೇರಿಯಲ್ಲಿ ನಿರ್ವಹಿಸುವುದು. ಹಾಗೂ ಕ್ರೋಢೀಕೃತ ವರದಿಯನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು. ಉಪನಿರ್ದೇಶಕರು, ಡಿ.ವೈ.ಪಿ.ಸಿ ಹಾಗು ಎ.ಪಿ.ಸಿ ಗಳು ಒಟ್ಟಾರೆ ತಿಂಗಳಿಗೆ ಕನಿಷ್ಟ 20 ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಿ ಪ್ರತಿ ತಿಂಗಳ 10 ನೇ ತಾರೀಖಿನ ಒಳಗೆ ಎಮ್.ಎಮ್.ಇ.ಆರ್ ವೆಚ್ಚಗಳ ವಿವರದೊಂದಿಗೆ ಕನಿಷ್ಟ 20 ಶಾಲೆಗಳ ಲೆಕ್ಕಪತ್ರ ಪರಿಶೀಲನೆ ಬಗ್ಗೆ ಕ್ರೋಡೀಕೃತ ಮಾಹಿತಿಯನ್ನು ನೀಡಬೇಕು. ಇಲ್ಲವಾದಲ್ಲಿ ವೇತನ ಅನುದಾನವನ್ನು ಬಿಡುಗಡೆ ಮಾಡಲಾಗುವದಿಲ್ಲ ಎಂದು ತಿಳಿಸಿದೆ.(ದಿನಾಂಕ: 01-08-2011 ರ ಜ್ಞಾಪನದೊಂದಿಗೆ ನೀಡಿರುವ ನಮೂನೆಯಲ್ಲಿ)
5. ರಾಜ್ಯ ಕಛೇರಿಯಿಂದ ಈಗಾಗಲೇ ಶಾಲಾ ಭೇಟಿ ನಮೂನೆಯನ್ನು ಸಿದ್ಧಪಡಿಸಿದ್ದು ಈ ನಮೂನೆಯಲ್ಲಿ ಮೇಲ್ಕಂಡ ಅನುದಾನಗಳನ್ನು ಖರ್ಚು ಮಾಡಿರುವ ಬಗ್ಗೆ ಶಾಲಾ ಭೇಟಿ ನೀಡಿದ ಅಧಿಕಾರಿಗಳು ಪಡೆದು ವರದಿ ನೀಡುವಂತೆ ಸೂಚಿಸುವುದು.

**ಶಾಲಾ ಮುಖ್ಯಸ್ಥರು ಕೈಗೊಳ್ಳಬೇಕಾದ ಕ್ರಮಗಳು:**

1. ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯ ವೆಬ್ ಸೈಟ್ ಪರಿಶೀಲಿಸಿ ಎಲ್ಲಾ ಸುತ್ತೋಲೆಗಳು ಹಾಗು ಮಾರ್ಗಸೂಚಿಗಳನ್ನು ಪಡೆಯುವುದು.
2. ವಿದ್ಯಾರ್ಥಿಗಳ ಪ್ರವಾಸಕ್ಕೆ ಸಂಬಂಧಿಸಿದಂತೆ ಈಗಾಗಲೇ ನೀಡಿರುವ ಸುತ್ತೋಲೆಯಂತೆ ಹಾಗೂ ಉಪನಿರ್ದೇಶಕರ ಮಾರ್ಗದರ್ಶನದಂತೆ ಕ್ರಮ ವಹಿಸುವುದು.
3. ವಿದ್ಯಾರ್ಥಿಗಳ ಪ್ರವಾಸ ಕುರಿತಂತೆ ಪೋಷಕರ ಸಭೆಯನ್ನು ಆಯೋಜಿಸುವುದು ಹಾಗೂ ಕೆಳಕಂಡ ಅಂಶಗಳನ್ನು ಗಮನಕ್ಕೆ ತರುವುದು.
   - ಪ್ರತಿ ಪೋಷಕರಿಂದ ಮಕ್ಕಳನ್ನು ಪ್ರವಾಸಕ್ಕೆ ಕಳುಹಿಸುವ ಬಗ್ಗೆ ಒಪ್ಪಿಗೆ ಪತ್ರವನ್ನು ಪಡೆಯುವುದು ಹಾಗೂ ಪೋಷಕರ ದೂರವಾಣಿ ಸಂಖ್ಯೆಯನ್ನು ಪಡೆಯುವುದು.
   - ಪ್ರವಾಸ ಕೈಗೊಳ್ಳುವ ಸ್ಥಳಗಳ ಬಗ್ಗೆ ಪೋಷಕರಿಗೆ ವಿವರ ನೀಡುವುದು.
   - ವಿದ್ಯಾರ್ಥಿಗಳು ಕುಡಿಯುವ ನೀರನ್ನು ತರಲು ಪೋಷಕರಿಗೆ ತಿಳಿಸುವುದು.

4. ಕೇಂದ್ರ ಸರ್ಕಾರದ ನಿಯಮಗಳಂತೆ ಹಾಗು ರಾಜ್ಯ ಕಛೇರಿಯಿಂದ ನೀಡಿರುವ ಸೂಚನೆಗಳನ್ನು ಅನುಸರಿಸಿ ಆರ್.ಎಂ.ಎಸ್.ಎ ಗೆ ಸಂಬಂಧಿಸಿದಂತೆ ಎಲ್ಲಾ ಲೆಕ್ಕಪತ್ರಗಳನ್ನು ಪ್ರತ್ಯೇಕವಾಗಿ ನಿರ್ವಹಿಸಬೇಕು ಹಾಗು ರಾಜ್ಯಕಛೇರಿಯಿಂದ ನೇಮಕ ಮಾಡುವ ಚಾರ್ಟಡ್ ಅಕೌಂಟೆಂಟ್‌ಗಳು ನಡೆಸುವ ಆಡಿಟ್‌ಗೆ ಎಲ್ಲಾ ಲೆಕ್ಕಪತ್ರಗಳನ್ನು ಸೂಕ್ತವಾಗಿ ನಿರ್ವಹಿಸಿ ಸಲ್ಲಿಸಬೇಕು.
5. ಕಾರ್ಯಕ್ರಮದಬಗ್ಗೆ ಸಿ.ಎ. ಆಡಿಟ್, ಎ.ಜಿ. ಆಡಿಟ್, ಇಂಟರ್ನಲ್ ಆಡಿಟ್, ಮತ್ತು ಇಲಾಖೆಯ ತಪಾಸಣೆಗಳು ಸಹ ನಡೆಯಲಿದ್ದು ಎಲ್ಲಾ ವಹಿಗಳು ಮತ್ತು ಲೆಕ್ಕ ಪತ್ರಗಳನ್ನು ಕರ್ನಾಟಕ ಆರ್ಥಿಕಸಂಹಿತೆ **(KFC)** ಗನುಗುಣವಾಗಿ ನಿರ್ವಹಿಸಿ ಆಡಿಟ್ ಮತ್ತು ತಪಾಸಣೆ ವೇಳೆಯಲ್ಲಿ ಒದಗಿಸುವುದು.
6. ಶಾಲೆಗೆ ಬಿಡುಗಡೆ ಆಗುವ ಅನುದಾನಕ್ಕೆ ಸಂಬಂಧಿಸಿದಂತೆ ಶಾಲೆಯ ಆಯವ್ಯಯವನ್ನು ಸಿದ್ಧಪಡಿಸಿ ವರ್ಷದ ಪ್ರಾರಂಭದಲ್ಲಿ ಎಸ್.ಡಿ.ಎಂ.ಸಿಯ ಅನುಮೋದನೆ ಯನ್ನು ಸಂಬಂಧಿಸಿದ ಶಿಕ್ಷಕರ ಸಹಿಯೊಂದಿಗೆ ಪಡೆಯುವುದು. ಹಾಗು ಈ ಸಂಬಂಧ ಖರೀದಿ/ಸೇವೆಗಳನ್ನು ಪಡೆಯುವಾಗ ಎಸ್.ಡಿ.ಎಂ.ಸಿ ಯ ಅನುಮೋದನೆಯ ಉಲ್ಲೇಖದೊಡನೆ ಕಾರ್ಯಾದೇಶ ನೀಡುವುದು ಹಾಗು ಸಂಬಂಧಪಟ್ಟ ಬಿಲ್ಲುಗಳನ್ನು ಮತ್ತು ರಶೀದಿಗಳನ್ನು ದೃಡೀಕರಣದೊಂದಿಗೆ ನಿರ್ವಹಿಸುವುದು.
7. ಶಾಲೆಯಲ್ಲಿ ಕಡ್ಡಾಯವಾಗಿ ಪ್ರಕಟಣ ಫಲಕ ಇಟ್ಟು ಶಾಲೆಗೆ ಬಿಡುಗಡೆಯಾಗಿರುವ ಅನುದಾನಗಳು ಹಾಗು ವೆಚ್ಚಗಳಬಗ್ಗೆ ವಿವರಗಳನ್ನು ಪ್ರಕಟಿಸಬೇಕು ಹಾಗು ಶಾಲಾ ಮಟ್ಟದಲ್ಲಿ ಆಗುವ ಎಲ್ಲಾ ಖರ್ಚು ವೆಚ್ಚಗಳನ್ನು ಪಾರದರ್ಶಕವಾಗಿಟ್ಟುಕೊಂಡು ಸೋಷಿಯಲ್ ಆಡಿಟ್ ಆಗುವಂತೆ ನಿರ್ವಹಿಸಬೇಕು.
8. ಲೆಕ್ಕ ಪತ್ರ ನಿರ್ವಹಣೆ ವಿಷಯದಲ್ಲಿ ಸಂದೇಹ ಹಾಗು ಸಮಸ್ಯೆಗಳಿದ್ದಲ್ಲಿ ಉಪನಿರ್ದೇಶಕರ ಗಮನಕ್ಕೆ ತರುವುದು ಹಾಗು ಉಪನಿರ್ದೇಶಕರ ಕಛೇರಿಯಲ್ಲಿ ಸರ್ವ ಶಿಕ್ಷಣ ಅಭಿಯಾನ ಹಾಗು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದ ಲೆಕ್ಕ ಅಧೀಕ್ಷಕರನ್ನು ಸಂಪರ್ಕಿಸಿ ಸಂದೇಹ ಹಾಗು ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳುವುದು.
9. ಎಲ್ಲಾ ವೆಚ್ಚಗಳಿಗೂ ನಿಯಮಾನುಸಾರ ವೋಚರ್‌ಗಳನ್ನು ನಿರ್ವಹಿಸುವುದು ಹಾಗು ಈ ವೋಚರ್‌ಗಳನ್ನು ಸಂಬಂಧ ಪಟ್ಟ ಶಿಕ್ಷಕರು/ಗುಮಾಸ್ತರು ಸ್ಟಾಕ್ ಪಡೆದ ಬಗ್ಗೆ ಹಾಗು ಬಳಸಿಕೊಂಡ ಬಗ್ಗೆ ದೃಢಿಕರಿಸಿದ ನಂತರ ಮುಖ್ಯ ಶಿಕ್ಷಕರು ಮೇಲುಸಹಿ ಮಾಡುವುದರೊಂದಿಗೆ ದೃಢೀಕರಿಸಬೇಕು.
10. ಪ್ರತಿ ತಿಂಗಳು ಶಾಲೆಯಲ್ಲಿ ಆದ ವೆಚ್ಚಗಳ ಪ್ರಗತಿಯ ವರದಿಯನ್ನು ಆಯಾ ತಿಂಗಳ 5ನೇ ತಾರೀಖಿನೊಳಗೆ ಉಪನಿರ್ದೇಶಕ(ಆಡಳಿತ)ರವರಿಗೆ ಸಲ್ಲಿಸಬೇಕು.
11. ಸರ್ಕಾರಿ ಶಾಲೆಗಳಿಗೆ ನೀಡಲಾಗಿರುವ ಅನುದಾನವನ್ನು ಪಾಸ್ ಪುಸ್ತಕದ ಆಧಾರದ ಮೇಲೆ ನಗದುಪುಸ್ತಕ ಹಾಗು ಲೆಡ್ಜರ್ ನಲ್ಲಿ ದಾಖಲು ಮಾಡಬೇಕು. ಇದು ನಗದು ಪುಸ್ತಕ ಮತ್ತು ಬ್ಯಾಂಕ್ ಪಾಸ್ ಪುಸ್ತಕಕ್ಕೆ ತಾಳೆ ಹೊಂದುವಂತಿರಬೇಕು.
12. ಶಾಲೆಯ ಆಯವ್ಯಯ ಸಿದ್ಧಪಡಿಸಿ ಎಸ್.ಡಿ.ಎಂ.ಸಿಯ ಅನುಮೋದನೆಯನ್ನು ಸಂಬಂಧಿಸಿದ ಶಿಕ್ಷಕರ ಸಹಿಯೊಂದಿಗೆ ವರ್ಷದ ಅರಂಭದಲ್ಲಿ ಪಡೆಯಬೇಕು.
13. ಆಯವ್ಯಯ ಸಿದ್ದಪಡಿಸುವಾಗ ಈಗಾಗಲೆ ಶಾಲೆಯಲ್ಲಿ ಲಭ್ಯವಿರುವ ಸಂಪನ್ಮೂಲವನ್ನು ಒಳಗೊಂಡಂತೆ ಗ್ರಂಥಾಲಯ ನಿರ್ವಹಣೆ, ಪ್ರಯೋಗಾಲಯ ನಿರ್ವಹಣೆ, ಕಛೇರಿ ನಿರ್ವಹಣೆ, ತರಗತಿ ನಿರ್ವಹಣೆ, ಆಟದ ಮೈದಾನ ಹಾಗು ಕ್ರೀಡೆಗಳ ನಿರ್ವಹಣೆ, ಇತರೆ ನಿರ್ವಹಣೆಗಳನ್ನು ಪರಿಗಣಿಸುವುದು.
14. ಕೇಂದ್ರ ಸರ್ಕಾರವು 2011-12 ನೇ ಸಾಲಿಗೆ ಆರ್.ಎಂ.ಎಸ್.ಎ ಯಿಂದ ಬಿಡುಗಡೆಯಾದ ಶಾಲಾ ಅನುದಾನದಲ್ಲಿ ರೂ 10000/- ಗಳನ್ನು ಗ್ರಂಥಾಲಯ ಅಭಿವೃದ್ಧಿಗಾಗಿ ರೂ 25000/-ಗಳನ್ನು ಪ್ರಯೋಗಾಲಯಕ್ಕಾಗಿ ರೂ 15000/- ಗಳನ್ನು ತರಗತಿ ನಿರ್ವಹಣೆ, ಕಛೇರಿ ನಿರ್ವಹಣೆ ಚಟುವಟಿಕೆಗಳಿಗೆ ಬಳಸಲು ಸೂಚನೆ ಇರುತ್ತದೆ. ಈ ಬಾಬ್ತುಗಳಲ್ಲಿ ಯಾವುದೇ ಲಿಖಿತ ಆದೇಶಗಳಿಲ್ಲದೆ ಅಥವಾ ಘಟನೋತ್ತರ ಲಿಖಿತ ಅನುಮೋದನೆ ಪಡೆಯದೆ ಬಳಕೆಯಾದಲ್ಲಿ ನಿಯಮ ಉಲ್ಲಂಘನೆ ಎಂದು ಪರಿಗಣಿಸಲಾಗುವುದು ಹಾಗು ಮುಖ್ಯ ಶಿಕ್ಷಕರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.
15. ರೂ. 2,000/-ಕ್ಕಿಂತ ಹೆಚ್ಚಿನ ಮೊತ್ತ ಯಾವುದೇ ಕಾರಣದಿಂದ ಸೆಲ್ಫ್ ಚೆಕ್‌ನಲ್ಲಿ ಡ್ರಾ ಮಾಡಬಾರದು. ಸಂಬಂಧಿಸಿದ ಸರಬರಾಜುದಾರರಿಂದ ಖರೀದಿಗೆ ಸಂಬಂಧಿಸಿದಂತೆ ಬಿಲ್/ವೋಚರ್ ಪಡೆದು ಚೆಕ್ ರೂಪದಲ್ಲಿ ಪಾವತಿಸಬೇಕು.

16. ಪ್ರತಿ ವೆಚ್ಚಕ್ಕೆ ಸಂಬಂಧಿಸಿದಂತೆ ವೋಚರ್ ನಿರ್ವಹಿಸಿ ನಿಯಮಾನುಸಾರ ವೋಚರ್ ಸಂಖ್ಯೆ, ದಿನಾಂಕ ನಮೂದಿಸಿ **Paid and Cancelled** ಸೀಲ್ ಹಾಕಿ ದಾಖಲೆ ಇಟ್ಟಿರುವುದು.

17. ಶಾಲಾ ಹಂತದ ವೆಚ್ಚಗಳಿಗೆ ಸಂಬಂಧಿಸಿದಂತೆ ಪ್ರತಿ ಅನುದಾನಕ್ಕೂ ಒಂದು 200 ಪುಟಗಳ ರೂಲ್ಡ್ ಹಾಳೆಯ ಹಾರ್ಡ್‌ಬೋರ್ಡ್ ಲಾಂಗ್ ನೋಟ್ ಪುಸ್ತಕ ನಿರ್ವಹಿಸಿ ಅದರಲ್ಲಿ ಈ ಕೆಳಗಿನಂತೆ ಪ್ರತಿ ವ್ಯವಹಾರಕ್ಕಾಗಿ (ವೆಚ್ಚ ಮತ್ತು ಜಮಾ) ದಿನಾಂಕ ನಮೂದಿಸಿ ದಾಖಲಿಸುವುದು ಹಾಗೂ ಮುಖ್ಯ ಶಿಕ್ಷಕರ ಕಿರು ಸಹಿಯೊಂದಿಗೆ ದೃಢೀಕರಿಸುವುದು.

| ದಿನಾಂಕ | ವೆಚ್ಚ/ಜಮಾ ವಿವರ | ಜಮಾ | ವೆಚ್ಚ | ಉಳಿಕೆ | ಮುಖ್ಯ ಶಿಕ್ಷಕರ ಕಿರು ಸಹಿ |
|---|---|---|---|---|---|
| | | | | | |

18. ಇದನ್ನು ಶಾಲಾ ತನಿಖೆ/ಭೇಟಿಯ ಸಂದರ್ಭಗಳಲ್ಲಿ ಪರಿಶೀಲಿನೆಗೆ ಹಾಜರುಪಡಿಸಬೇಕು.

19. ಆರ್.ಎಂ.ಎಸ್.ಎ.ಯಡಿ ಚಟುವಟಿಕೆಗಳ ವೆಚ್ಚ/ಜಮಾ ಮತ್ತು ಉಳಿಕೆ ವಿವರಗಳು ಬ್ಯಾಂಕ್ ಪಾಸ್ ಪುಸ್ತಕಕ್ಕೆ ತಾಳೆ ಆಗಬೇಕು.

20. ಪ್ರತಿ ಜಮಾ/ವೆಚ್ಚ ಮಾಡಿದಾಗಲೂ ಅಗತ್ಯವಾಗಿ ಬ್ಯಾಂಕ್ ಪಾಸ್ ಪುಸ್ತಕದಲ್ಲಿ ಎಂಟ್ರಿ ಅಪ್‌ಡೇಟ್ ಮಾಡಿಸುವುದು.

13/10/11

ನಿರ್ದೇಶಕರು

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ

ಪ್ರತಿಯನ್ನು

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ)ರವರ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಯೋಜನಾ ಉಪಸಮನ್ವಯಾಧಿಕಾರಿಗಳು(ಆರ್.ಎಂ.ಎಸ್.ಎ)ರವರಿಗೆ ಮಾಹಿತಿಗಾಗಿ ಹಾಗೂ ಅಗತ್ಯ ಕ್ರಮಕ್ಕಾಗಿ.
3. ಇ–ಆಡಳಿತ ವಿಭಾಗ, ಆಯುಕ್ತರ ಕಛೇರಿರವರಿಗೆ ಮಾರ್ಗಸೂಚಿಯನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಲು ಕೋರಿ.

2011-12 ನೇ ಸಾಲಿನ ಕಾರ್ಯ ಚಟುವಟಿಕೆಗಳಿಗೆ ಬಿಡುಗಡೆ ಮಾಡುತ್ತಿರುವ ಅನುದಾನಗಳ ಜಿಲ್ಲಾವಾರು ಹಂಚಿಕೆ ವಿವರ

| Sl No | School Name | School grant | | | | | Minor Repair grant | | Grants for Excursion of 10th std students | | Total amount released |
|---|---|---|---|---|---|---|---|---|---|---|---|
| | | No of High Schools | Upgraded Schools | | Total Schools | Amount released @ Rs 50,000/school | Total Schools | Amount released @ Rs 25,000/school | Number of Students in 10th Std | Amount released @ Rs 200/- per student | |
| | | | 2009-10 | 2010-11 | Phy | Fin | Phy | Fin | Phy | Fin | |
| 1 | BAGALKOT | 136 | 3 | 17 | 156 | 78.000 | 101 | 25.250 | 10822 | 21.644 | 124.894 |
| 2 | BANGALORE NORTH | 49 | 1 | 1 | 51 | 25.500 | 41 | 10.250 | 5719 | 11.438 | 47.188 |
| 3 | BANGALORE RURAL | 56 | 2 | 4 | 62 | 31.000 | 45 | 11.250 | 6456 | 12.912 | 55.162 |
| 4 | BANGALORE SOUTH | 76 | 2 | 3 | 81 | 40.500 | 64 | 16.000 | 8336 | 16.672 | 73.172 |
| 5 | BELGAUM | 117 | 3 | 4 | 124 | 62.000 | 77 | 19.250 | 8409 | 16.818 | 98.068 |
| 6 | BELLARY | 155 | 3 | 2 | 160 | 80.000 | 112 | 28.000 | 14010 | 28.02 | 136.020 |
| 7 | BIDAR | 143 | 3 | 9 | 155 | 77.500 | 115 | 28.750 | 10748 | 21.496 | 127.746 |
| 8 | BIJAPUR | 112 | 3 | 21 | 136 | 68.000 | 110 | 27.500 | 7928 | 15.856 | 111.356 |
| 9 | CHAMRAJANAGAR | 79 | 2 | 0 | 81 | 40.500 | 54 | 13.500 | 6808 | 13.616 | 67.616 |
| 10 | CHIKBALLAPUR | 103 | 2 | 1 | 106 | 53.000 | 88 | 22.000 | 10704 | 21.408 | 96.408 |
| 11 | CHIKKAMANGALORE | 112 | 2 | 1 | 115 | 57.500 | 102 | 25.500 | 7307 | 14.614 | 97.614 |
| 12 | CHIKKODI | 145 | 2 | 12 | 159 | 79.500 | 96 | 24.000 | 12702 | 25.404 | 128.904 |
| 13 | CHITRADURGA | 106 | 2 | 3 | 111 | 55.500 | 94 | 23.500 | 7675 | 15.35 | 94.350 |
| 14 | DAKSHINA KANNADA | 157 | 3 | 1 | 161 | 80.500 | 121 | 30.250 | 11486 | 22.972 | 133.722 |
| 15 | DAVANAGERE | 149 | 2 | 4 | 155 | 77.500 | 142 | 35.500 | 11569 | 23.138 | 136.138 |
| 16 | DHARWAD | 84 | 3 | 14 | 101 | 50.500 | 49 | 12.250 | 6437 | 12.874 | 75.624 |
| 17 | GADAG | 81 | 2 | 25 | 108 | 54.000 | 60 | 15.000 | 5766 | 11.532 | 80.532 |
| 18 | GULBARGA | 243 | 5 | 17 | 265 | 132.500 | 168 | 42.000 | 15897 | 31.794 | 206.294 |
| 19 | HASSAN | 241 | 0 | 0 | 241 | 120.500 | 190 | 47.500 | 12779 | 25.558 | 193.558 |
| 20 | HAVERI | 126 | 3 | 7 | 136 | 68.000 | 94 | 23.500 | 8280 | 16.56 | 108.060 |
| 21 | KODAGU | 46 | 1 | 0 | 47 | 23.500 | 36 | 9.000 | 2748 | 5.496 | 37.996 |
| 22 | KOLAR | 113 | 2 | 4 | 119 | 59.500 | 88 | 22.000 | 12414 | 24.828 | 106.328 |
| 23 | KOPPAL | 126 | 2 | 15 | 143 | 71.500 | 95 | 23.750 | 11828 | 23.656 | 118.906 |
| 24 | MADHUGIRI | 92 | 2 | 0 | 94 | 47.000 | 71 | 17.750 | 6672 | 13.344 | 78.094 |
| 25 | MANDYA | 210 | 2 | 1 | 213 | 106.500 | 163 | 40.750 | 14048 | 28.096 | 175.346 |
| 26 | MYSORE | 207 | 3 | 13 | 223 | 111.500 | 163 | 40.750 | 19528 | 39.056 | 191.306 |
| 27 | RAICHUR | 154 | 3 | 24 | 181 | 90.500 | 100 | 25.000 | 12086 | 24.172 | 139.672 |
| 28 | RAMANAGARA | 102 | 2 | 1 | 105 | 52.500 | 76 | 19.000 | 6432 | 12.864 | 84.364 |
| 29 | SHIMOGA | 152 | 3 | 7 | 162 | 81.000 | 132 | 33.000 | 12023 | 24.046 | 138.046 |
| 30 | SIRSI | 67 | 2 | 3 | 72 | 36.000 | 51 | 12.750 | 4703 | 9.406 | 58.156 |
| 31 | TUMKUR | 130 | 3 | 0 | 133 | 66.500 | 106 | 26.500 | 8339 | 16.678 | 109.678 |
| 32 | UDUPI | 104 | 2 | 0 | 106 | 53.000 | 82 | 20.500 | 7416 | 14.832 | 88.332 |
| 33 | UTTARA KANNADA | 43 | 2 | 4 | 49 | 24.500 | 34 | 8.500 | 3006 | 6.012 | 39.012 |
| 34 | YADGIRI | 117 | 3 | 6 | 126 | 63.000 | 78 | 19.500 | 7872 | 15.744 | 98.244 |
| | Total | 4133 | 80 | 224 | 4437 | 2218.500 | 3198 | 799.500 | 318953 | 637.906 | 3655.906 |

13/10/11

ನಿರ್ದೇಶಕರು

ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ